**<u>ದಿನಾಂಕಃ 12.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಎಸ್.ಬಿ.ಡಿ. ವಕೀಲರಿಂದಃ</u>**

1) ನನ್ನ ಮನೆಯ ಪಕ್ಕದಲ್ಲಿಯೇ ಗೀತಾ ರವರ ಮನೆ ಇದೆ. ಅದೇ ರೀತಿ ನಮ್ಮ ಜಮಿನಿನ ಪಕ್ಕದಲ್ಲಿ ಗೀತಾ ರವರ ಜಮೀನು ಇದೆ. ಗೀತಾ ರವರಿಗೆ ನೀವು ಸಹಕಾರಿಯಾಗಿ ಇರುತ್ತೀರೀ ಎಂದರೆ ಸರಿ. ದಾವಾ ಸ್ವತ್ತು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ ಆದರೆ ಅದರಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಆಕೆಯ ಸಂಬಂಧಿಕರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಗೀತಾ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಇರುತ್ತಾರೆ ಎಂದು ತೋರಿಸಲು ಅವರು ದಾಖಲೆಗಳನ್ನು ನೀಡಿರುತ್ತಾರೆ. ಆದರೆ ನಾನು ಆ ಬಗ್ಗೆ ದಾಖಲೆಗಳನ್ನು ನೀಡಿಲ್ಲ. 30 ವರ್ಷಗಳಿಂದಲೂ ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ವಾಜ್ಯ ಇದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**